ರಸ್ತೆ ನಿರ್ಮಾಣ ಮತ್ತು 55.05 ಲಕ್ಷ ರೂ.ಗಳನ್ನು ಭೂಕಂಪ ನಿರೋಧ ಮನೆಗಳನ್ನು ಕಟ್ಟಲು ತಹಶೀಲ್ದಾರ್ರವರಿಗೆ ಮತ್ತು ನಾಗರಿಕ ಸೌಲಭ್ಯಗಳನ್ನು ಒದಗಿಸಲು 8.40 ಲಕ್ಷ ರೂ.ಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಬಿಡುಗಡೆ ಮಾಡಲಾಗಿದೆ. ಅಲ್ಲದೆ, ಉಳಿದಿರುವ ಮನೆಗಳ ನಿರ್ಮಾಣಕ್ಕಾಗಿ 2.00 ಕೋಟಿ ರೂ.ಗಳು ಅಗತ್ಯವಿದೆಯೆಂದು ಅಂದಾಜು ಮಾಡಲಾಗಿದೆ.

ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಭೂಕಂಪದಿಂದ ಹಾನಿಗೊಳಗಾದ ಗ್ರಾಮಗಳಲ್ಲಿ ನೊಂದ ಸಂತ್ರಸ್ಥರಿಗೆ ಪರಿಹಾರ ನೀಡಲು ಮತ್ತು ಭೂಕಂಪ ನಿರೋಧಕ ಮನೆಗಳನ್ನು ಕಟ್ಟಲು ಸರ್ಕಾರವು ಈಗಾಗಲೇ ತ್ವರಿತ ಕ್ರಮಗಳನ್ನು ಕೈಗೊಂಡಿದ್ದು, ಅವಶ್ಯಕ ಹಣವನ್ನು ಸಂಬಂಧಪಟ್ಟ ಇಲಾಖೆಗಳಿಗೆ ಬಿಡುಗಡೆ ಮಾಡಲಾಗಿದೆ. ಭೂಕಂಪದಿಂದ ನೊಂದ ಸಂತ್ರಸ್ಥರಿಗೆ ಪರಿಹಾರ ಮತ್ತು ಪುನರ್ವಸತಿ ಒದಗಿಸಲು ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಂಡಿದ್ದು ಈ ಬಗ್ಗೆ ಯಾವುದೇ ತಾರತಮ್ಯವನ್ನೂ ಮಾಡುವುದಿಲ್ಲವೆಂದು ಮಾನ್ಯ ಸದಸ್ಯರಿಗೆ ಈ ಮೂಲಕ ತಿಳಿಸಲಿಚ್ಚಿಸುತ್ತೇನೆ.

(4) ಹಾಲಗೇರಿ – ನೀರಲಕೇರಿ ಗ್ರಾಮಗಳ ಹತ್ತಿರ ನೀರಾವರಿ ಟ್ಯಾಂಕ್ ಕಟ್ಟುವುದು

ಶ್ರೀ ಎಂ.ಕೆ. ಪಟ್ಟಣಶೆಟ್ಟಿ : ಮಾನ್ಯ ಅಧ್ಯಕ್ಷರೇ, ಹಾಲಿಗೇರಿ - ನೀರಲಗೇರಿ ಗ್ರಾಮಗಳ ಹತ್ತಿರ ನೀರಾವರಿ ಟ್ಯಾಂಕ್ ಜಿಲ್ಲಾ ಪರಿಷತ್ನಿಂದ ಮಂಜೂರಾಗಿ ನಿಮ್ಮ ಇಲಾಖೆಗೆ ವರ್ಗಾವಣೆಯಾಗಿರುತ್ತದೆ. ಆದರೆ, ಈ ಯೋಜನೆಯನ್ನು ಕೈಬಿಡಲು ಕಾರಣವೇನು? ಈ ಯೋಜನೆಯನ್ನು 1994-95ರ ಸಾಲಿನ ಆಯ-ವ್ಯಯದಲ್ಲಿ ಸೇರ್ಪಡೆ ಮಾಡಲಾಗುವುದೇ?

ಡಾ॥ ಆರ್.ಬಿ. ಚೌಧುರಿ (ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆ ಬಾದಾಮಿ ತಾಲ್ಲೂಕಿನ ಹಾಲಿಗೇರಿ-ನೀರಲಗೇರಿ ಗ್ರಾಮಗಳ ಹತ್ತಿರ ಜಿಲ್ಲಾ ಪರಿಷತ್ ವತಿಯಿಂದ 1992-93ನೇ ಸಾಲಿನಲ್ಲಿ ಸಣ್ಣ ನೀರಾವರಿ ಹೊಸಕೆರೆ ನಿರ್ಮಾಣಗೊಳಿಸಲು ಅಂದಾಜು ಮೊತ್ತವಾದ 24.20ಲಕ್ಷ ರೂಪಾಯಿಗಳಿಗೆ ಸರ್ಕಾರದಿಂದ ದಿನಾಂಕ 31.3.92ರಲ್ಲಿ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿದೆ. ಇದರ ಅಚ್ಚುಕಟ್ಟು ಪ್ರದೇಶ 88 ಹೆಕ್ಟೇರ್ ಇರುವುದರಿಂದ ಸದರಿ ಕಾಮಗಾರಿಯನ್ನು ಅಕ್ಟೋಬರ್, 1992 ರಲ್ಲಿ ಸಣ್ಣ ನೀರಾವರಿ ಇಲಾಖೆಗೆ ವರ್ಗಾಯಿಸಲಾಗಿದೆ. 1993-94ರ ಸಣ್ಣ ನೀರಾವರಿ ಆಯ-ವ್ಯಯದಲ್ಲಿ ಈ ಕಾಮಗಾರಿ ಸೇರಿಲ್ಲವಾದ್ದರಿಂದ 1994-95ರ ಆಯ-ವ್ಯಯದಲ್ಲಿ ಸೂಕ್ತ ಅನುದಾನಕ್ಕೆ ಸದರಿ ಕಾಮಗಾರಿಯನ್ನು ಸೇರಿಸಲು ಕ್ರಮ ತೆಗೆದುಕೊಳ್ಳಲಾಗುವುದು.

(5) ಬೆಳಗಾಂ ಜಿಲ್ಲೆ ಸೌದತ್ತಿ ತಾಲ್ಲೂಕಿನ ಹಲಕಿಕ್ಯಾಸ್ನಿಂದ ಕುಟರನ ಹಬ್ಬಿವರೆಗೆ ರಸ್ತೆ ದುರಸ್ತಿ.

ಶ್ರೀ ಎಸ್.ಎಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ ಬೆಳಗಾಂ ಜಿಲ್ಲಾ ಸೌದತ್ತಿ ತಾಲ್ಲೂಕಿನ ಹಲಕಿಕ್ಯಾಸ್ನಿಂದ ಕುಟರನ ಹಬ್ಬಿವರೆಗೆ ರಸ್ತೆ ಅಂದರೆ ಬೈಲಹೊಂಗಲ ಗೋಕಾಕ್ ರೋಡ್ ಹಾಗೂ ಬಾಗಲಕೋಟೆ ಗೋಕಾಕ್ ರೋಡ್ ಇದು ರಾಜ್ಯದ ಒಂದು ಮುಖ್ಯ ರಸ್ತೆ ಇರುತ್ತದೆ. ಈ ರಸ್ತೆ ಮಲಪ್ರಭಾ ಸಕ್ಕರೆ ಕಾರ್ಖಾನೆ ಕಮ್ಯಾಂಡ್ ಏರಿಯಾದಲ್ಲಿ ಹಾಗೂ ಗೋಕಾಕ್ ಸಕ್ಕರೆ ಕಮ್ಯಾಂಡ್ ಏರಿಯಾದಲ್ಲಿ ಬರುವ ರಸ್ತೆಯಾಗಿರುತ್ತದೆ. ಅದು ಅಲ್ಲದೆ ಗೋಕಾಕ್ನಿಂದ ಎಲ್ಲಮ್ಮನಗುಡ್ಡಕ್ಕೆ ಹಾಗೂ ಶ್ರೀಕ್ಷೇತ್ರ ಸೋಗಲಕ್ಕೆ ಹೋಗುವ ರಸ್ತೆಯಾಗಿರುತ್ತದೆ. ಈ ರಸ್ತೆಯ ಮೇಲೆ ಸಕ್ಕರೆಕಾರ್ಖಾನೆ ಗಾಡಿಗಳು ಹಾಗೂ ಎಲ್ಲಮ್ಮನ ಗುಡ್ಡಕ್ಕೆ ಹೋಗುವ ಚಕ್ಕಡಿಗಳು ಹಾಯ್ದಾಡಿ ಸಂಪೂರ್ಣ ನಾಶವಾಗಿರುತ್ತದೆ. ಲೋಕೋಪಯೋಗಿ ಇಲಾಖೆಯವರು ಈ ರಸ್ತೆ ಕಾರ್ಪೆಟಿಂಗ್ ಅಥವಾ ರೀಕಾರ್ಪೆಟಿಂಗ್ ಮಾಡದೇ ಕೇವಲ ತೆಗ್ಗುಗಳನ್ನು ಮಾತ್ರ ತುಂಬಲಿಕ್ಕೆ ಹತ್ತಿರುತ್ತಾರೆ. ಈ ರಸ್ತೆಯನ್ನು ಡಾಂಬರೀಕರಣ 1967ನೇ ಇಸವಿಯಲ್ಲಿ ಶ್ರೀ ಎಂ.ಆರ್.